# ಜೀವನಪ್ರಭ



## ಧನುರ್ದಾಸ

ಪುಷ್ಪ ಶೇಷಾದ್ರಿ

[ಮೈಸೂರಿನ ನಿವಾಸಿಗಳಾದ ಲೇಖಕಿ ರಾಮಾನುಜಾಚಾರ್ಯರ ಶಿಷ್ಯನಾದ ಧನುರ್ದಾಸನ ಜೀವನವನ್ನು ಪರಿಚಯಿಸಿದ್ದಾರೆ.]

ವಿಶಿಷ್ಟಾದ್ವೈತದ ಆಚಾರ್ಯರಾದ ರಾಮಾನುಜಾಚಾರ್ಯರಿಗೆ ಅತ್ಯಂತ ಪ್ರಭಾವಶಾಲಿಗಳಾದ ಶಿಷ್ಯರುಗಳಿದ್ದರು. ಅವರಲ್ಲಿ ಧನುರ್ದಾಸನೂ ಒಬ್ಬನಾಗಿದ್ದನು. ಅವನಲ್ಲಿ ಆದ ಪರಿವರ್ತನೆ ಮತ್ತು ಶ್ರೀರಾಮಾನುಜರು ಅವನ ಮೇಲೆ ತೋರಿದ ಕರುಣೆಗಳು ಮನನಯೋಗ್ಯ.

ಶೂರನೂ, ಬಲಶಾಲಿಯೂ ಆದ ಧನುರ್ದಾಸನು ಜನಿಸಿದ್ದು ಮಲ್ಲರ ಪಂಗಡದಲ್ಲಿ. ಅದೇ ಊರಿನ ಕನಕಾಂಬಾ ಎಂಬ ಅತ್ಯಂತ ಸುಂದರ ಯುವತಿಯನ್ನು ಪ್ರೀತಿಸಿ ಧನುರ್ದಾಸ ಮದುವೆಯಾದ. ಅವಳು ಅತಿ ರೂಪವತಿಯಾದ್ದರಿಂದ ಅವಳ ಸೌಂದರ್ಯಕ್ಕೆ ಮಾರುಹೋಗಿದ್ದ. ಅವಳ ತಿದ್ದಿದ ಹುಬ್ಬುಗಳು, ಹೊಳೆಯುವ ಸುಂದರ ನಯನಗಳು ಮತ್ತು ಉದ್ದವಾದ ಕೇಶರಾಶಿ ಧನುರ್ದಾಸನನ್ನು ಮರುಳು ಮಾಡಿದ್ದವು.

ಪ್ರತಿ ಚೈತ್ರಮಾಸದಲ್ಲಿ, ಶ್ರೀರಂಗದಲ್ಲಿ ರಂಗನಾಥನಿಗೆ 'ಚೈತ್ರೋತ್ಸವ' ಬಹಳ ವಿಜೃಂಭಣೆಯಿಂದ ನೆರವೇರುವುದು. ಒಂದು ವರ್ಷ ಇದನ್ನು ವೀಕ್ಷಿಸಲು, ಧನುರ್ದಾಸ ದಂಪತಿಗಳು ಶ್ರೀರಂಗಕ್ಕೆ ಬಂದರು. ಉತ್ಸವವು ರಸ್ತೆಯಲ್ಲಿ ಬರುತ್ತಿರಲು, ಅದರ ಜೊತೆಗೇ ನಡೆದು ಬರುತ್ತಿದ್ದರು ಈ ದಂಪತಿಗಳು. ಕನಕಾಂಬೆಗೆ ಎಲ್ಲಿ ಬಿಸಿಲು ತಗಲುವುದೋ ಎಂದು ಬಹಳ ಶ್ರದ್ಧೆಯಿಂದ ಅವಳಿಗೆ ಸ್ವಲ್ಪವೂ ಆಯಾಸವಾಗದಂತೆ ಅವಳಿಗೆ ನೆರಳಾಗಿ ಪಕ್ಕದಲ್ಲಿದ್ದು, ಉತ್ಸವವನ್ನು ನೋಡುವುದರ ಬದಲು ಕನಕಾಂಬೆಯ ರೂಪ-ಲಾವಣ್ಯಗಳನ್ನೇ ವೀಕ್ಷಿಸುತ್ತ, ಉತ್ಸವದ ಬೀದಿಯಲ್ಲಿ ನಡೆದ ಧನುರ್ದಾಸ.

ಆ ಸಮಯಕ್ಕೆ ಶ್ರೀರಾಮಾನುಜರು ತಮ್ಮ ಶಿಷ್ಯವೃಂದದ ಜೊತೆಗೆ, ಉತ್ಸವವನ್ನು ವೀಕ್ಷಿಸಲು ಬಂದರು. ಆಗ ಇವರಿಗೆ, ಈ ವಿಚಿತ್ರ ದಂಪತಿಗಳು ಕಣ್ಣಿಗೆ ಬೀಳಲು, ಆಶ್ಚರ್ಯಚಕಿತರಾಗಿ, "ಇವನು ಆಕೆಯಲ್ಲಿ ಇಷ್ಟೊಂದು ಅನುರಕ್ತನಾಗಿರುವನಲ್ಲ? ವ್ಯರ್ಥವಾಗಿ ಜೀವನವನ್ನು ಹಾಳು ಮಾಡಿಕೊಳ್ಳುವನಲ್ಲ! ಇದೇ ಅವನ ದೃಷ್ಟಿಯನ್ನು ಶ್ರೀರಂಗನಾಥನಲ್ಲಿಟ್ಟರೆ ಜನ್ಮ ಸಾರ್ಥಕವಾಗುವುದಲ್ಲ" ಎಂದು ಮನದಲ್ಲೇ ಯೋಚಿಸಿದರು. ಇಷ್ಟು ಜನಜಂಗುಳಿಯಲ್ಲೂ ಸಹ ಸುತ್ತಮುತ್ತಲಿನ ಪರಿವೆಯೇ ಇಲ್ಲದೆ, ಆ ಹೆಣ್ಣಿನತ್ತ ಆಕರ್ಷಿತನಾಗಿರುವನಲ್ಲ! ಹೇಗಾದರೂ ಅವನ ಮನಸ್ಸನ್ನು ರಂಗನಾಥನೆಡೆಗೆ ತಿರುಗುವಂತೆ ಮಾಡಬೇಕೆಂದು ಶ್ರೀರಾಮಾನುಜರು ನಿರ್ಧರಿಸಿದರು.

ಉತ್ಸವವು ಮುಗಿದನಂತರ, ರಾಮಾನುಜರು ಕೆಲವು ಶಿಷ್ಯರನ್ನು ಕರೆದು ಆ ವ್ಯಕ್ತಿಯನ್ನು ತೋರಿಸಿ, ಅವನ ಕುಲ-ಹೆಸರು ಮತ್ತು ಎಲ್ಲಿ ತಂಗಿರುವನೆಂದು ತಿಳಿದು, ಆತನನ್ನು ತಮ್ಮಲ್ಲಿಗೆ ಕರೆದುತರುವಂತೆ ಆಜ್ಞಾಪಿಸಿದರು. ರಾಮಾನುಜರ ಕಣ್ಣಿಗೆ ಕಾಣಿಸಿಕೊಂಡ ಪ್ರಯುಕ್ತ ಧನುರ್ದಾಸನ ಜೀವನದಲ್ಲಿ ಒಂದು ದೊಡ್ಡ ಮಾರ್ಪಾಟಾಗುವ ಸಂದರ್ಭ ಒದಗಿ ಬಂದಂತಾಯಿತು.

ಧನುರ್ದಾಸನು ಪತ್ನಿಯ ಜೊತೆಯಲ್ಲಿ ಬಂದು ರಾಮಾನುಜರನ್ನು ಕಂಡು "ನನ್ನನ್ನು ಬರಮಾಡಿಕೊಂಡ ಕಾರಣವಾದರೂ ಏನು? ತಮ್ಮ ಪರಿಚಯವೇ ನನಗಿಲ್ಲವಲ್ಲ!" ಎಂದನು.

ರಾಮಾನುಜರು ಧನುರ್ದಾಸನನ್ನು ಹತ್ತಿರಕ್ಕೆ ಕರೆದು, ಅವನ ಹೆಸರು ಮುಂತಾದ ವಿವರಗಳನ್ನೆಲ್ಲ ಕೇಳಿ, "ಉತ್ಸವದ ಮಧ್ಯದಲ್ಲಿ ಜನ ತುಂಬಿದ ರಸ್ತೆಯಲ್ಲಿ ಎಲ್ಲರೂ ದೇವರನ್ನೇ ನೋಡುತ್ತಿರುವಾಗ ನೀನು ಮಾತ್ರ ಹೀಗೆ ನಿನ್ನ ಪತ್ನಿಯೆಡೆಗೆ ಅಪಾರ ಪ್ರೇಮವನ್ನು ಪ್ರದರ್ಶಿಸುವುದು, ನಿನ್ನಂತಹ ಶೂರನಿಗೆ ಸರಿಯಲ್ಲ" ಎಂದರು.

ಅದಕ್ಕೆ ಧನುರ್ದಾಸ, "ಅವಳ ಆ ಸುಂದರ ನಯನಗಳನ್ನು ನೋಡುತ್ತಿದ್ದರೆ, ಪ್ರಪಂಚವನ್ನೇ, ನನ್ನ ಇರುವಿಕೆಯನ್ನೇ ಮರೆತು ಬಿಡುವೆ. ಅವಳ ರೂಪಿಗೆ ನಾನು ದಾಸನಾಗಿರುವೆ. ಅವಳಿಲ್ಲದೆ ನಾನು ಬದುಕಲಾರೆ. ಅವಳ ಕಣ್ಣುಗಳ ಕಾಂತಿಯನ್ನು ಮರೆಯಲಾರೆ" ಎಂದನು.

ರಾಮಾನುಜರು, "ಧನುರ್ದಾಸ, ಕನಕಾಂಬೆಯ ಕಣ್ಣುಗಳಿಗಿಂತ, ಇನ್ನೂ ಸಾವಿರ ಪಾಲು ಅಧಿಕ ಕಾಂತಿಯುಳ್ಳ ಕಣ್ಣುಗಳನ್ನು ನಾನು ನಿನಗೆ ತೋರಿಸಿದರೆ?" ಎಂದರು. "ಇಲ್ಲ, ಅದು ಖಂಡಿತ ಸಾಧ್ಯವಿಲ್ಲ, ಸ್ವಾಮಿ. ಒಂದು ಪಕ್ಷ ನೀವು ಹೇಳುವುದು ನಿಜವಾದರೆ, ನಾನು ನಿಮ್ಮ ಮಾತುಗಳನ್ನು ನಿಜವಾಗಿಯೂ ಸ್ವೀಕರಿಸುವೆ. ಆಗ ನನ್ನ ಜನ್ಮ ಸಾರ್ಥಕವೆಂದು ಭಾವಿಸುವೆ" ಎಂದ ಧನುರ್ದಾಸ.

ನಂತರ ಯತಿವರ್ಯರು, ಧನುರ್ದಾಸನ ಕೈಹಿಡಿದು ಕರೆದುಕೊಂಡು ಹೋಗಿ, ಶ್ರೀರಂಗನಾಥನ ಮುಂದೆ ನಿಲ್ಲಿಸಿ, 'ನೋಡು, ಒಮ್ಮನಸ್ಸಿನಿಂದ, ರಂಗನಾಥನ ಕಣ್ಣುಗಳಲ್ಲಿ ಕಣ್ಣಿಟ್ಟು,

ವೀಕ್ಷಿಸು" ಎಂದರು. ಒಂದೇ ಸಲಕ್ಕೆ ಆ ಕಣ್ಣುಗಳ ದರ್ಶನದಿಂದ ಅವನ ಮೈಯಲ್ಲಿ ಮಿಂಚು ಸುಳಿದಂತಾಯಿತು. ಇದೇ ರೀತಿ ಶ್ರೀರಾಮಾನುಜರು, ಕೆಲವು ದಿನ ಅವನನ್ನು ರಂಗನಾಥನ ದರ್ಶನಕ್ಕೆ ಕಳುಹಿಸಿದರು. ರಂಗನಾಥನ ಕಣ್ಣಿನ ಕಾಂತಿಯನ್ನು ಬಾರಿ, ಬಾರಿಗೂ ವೀಕ್ಷಿಸಿ, ವೀಕ್ಷಿಸಿ, "ಆಹಾ! ನಿಜ, ಅದ್ಭುತ, ಇದಕ್ಕಿಂತ ಸುಂದರವಾದ ಕಮಲದಳನಯನವನ್ನು ನಾನು ಕಂಡಿಲ್ಲ. ಇದಕ್ಕೆ ಈ ಪ್ರಪಂಚದಲ್ಲಿ ಸರಿಸಾಟಿ ಯಾವುದೂ ಇಲ್ಲ" ಎಂದು ನುಡಿದು, ತನ್ನನ್ನು ತಾನೇ ಶ್ರೀರಂಗನಾಥನಲ್ಲಿ ಅರ್ಪಿಸಿಕೊಂಡ, ಧನುರ್ದಾಸ.

"ಕನಕಾಂಬೆಗಿಂತ ರೂಪವಂತರು ಎಲ್ಲೂ ಇಲ್ಲವೆಂದು ಇಷ್ಟು ದಿನ, ನನ್ನ ಜೀವನವನ್ನು ವ್ಯರ್ಥಗೊಳಿಸಿದೆ. ಇದೀಗ ನನ್ನ ಜನ್ಮ ಸಾರ್ಥಕವಾಗುವ ಸಮಯ ಬಂದಿತು. ಆಚಾರ್ಯರಿಂದ ನನ್ನ ಕಣ್ಣುಗಳು ತೆರೆದವು", ಎಂದು ತಿಳಿದು ರಾಮಾನುಜರಲ್ಲಿ ಹೋಗಿ ಈ ರೀತಿ ವ್ಯಾಮೋಹದ ಬಲೆಯಿಂದ ಬಿಡಿಸಿ, ಮುಕ್ತಿಮಾರ್ಗಕ್ಕೆ ತಂದ ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಿ ದಾರಿ ತೋರಿಸಬೇಕೆಂದು ಬೇಡಿದ. ಅಂತೆಯೇ, ಆಚಾರ್ಯರು, ಧನುರ್ದಾಸನಿಗೆ ಪಂಚ ಸಂಸ್ಕಾರಾದಿಗಳನ್ನು ತಿಳಿಸಿ, ಉಪದೇಶ ಮಾಡಿ, ಶಿಷ್ಯನನ್ನಾಗಿ ಸ್ವೀಕರಿಸಿದರು. ಇದನ್ನು ತಿಳಿದ ಕನಕಾಂಬೆ, ತಾನೂ ಸಹ ಮುಕ್ತಿಮಾರ್ಗಕ್ಕೆ ಬರಲು ಆಶಿಸಿರುವುದಾಗಿಯೂ ತನ್ನನ್ನೂ ಶ್ರೀವೈಷ್ಣವ ಪಂಗಡಕ್ಕೆ ಸೇರಿಸಿಕೊಳ್ಳಬೇಕೆಂದೂ ಬೇಡಿದಳು. ರಾಮಾನುಜರು, ಆ ದಂಪತಿಗಳನ್ನು ಹರಸಿ, ತಮ್ಮ ಮಠದಲ್ಲೇ ಇದ್ದು ಸೇವೆ ಸಲ್ಲಿಸಿಕೊಂಡಿರುವಂತೆ ಆಜ್ಞಾಪಿಸಿದರು.

ಈ ರೀತಿ ಶ್ರೀರಾಮಾನುಜರು ಜಾತಿ, ಮತ, ಭೇದಗಳನ್ನು ಎಣಿಸದೆ ಶಿಷ್ಯರನ್ನು ಸ್ವೀಕರಿಸಿದರು. ತಾನು ಕೀಳು ಜಾತಿಯವನಾದರೂ ಸಹ, ಆಚಾರ್ಯರು ತನ್ನನ್ನು ಕೈಹಿಡಿದು, ಮೇಲೆತ್ತಿ ಶಿಷ್ಯನನ್ನಾಗಿ ಸ್ವೀಕರಿಸಿದ್ದರಿಂದ, ಧನುರ್ದಾಸನೂ ಸಹ ಬಹಳ ಭಕ್ತಿ, ಶ್ರದ್ಧೆಗಳಿಂದ ನಡೆದುಕೊಳ್ಳುತ್ತಿದ್ದನು.

ರಾಮಾನುಜರು, ಬೆಳಿಗ್ಗೆ ನಿತ್ಯಕರ್ಮಾದಿಗಳಿಗೆ ನದಿಗೆ ಹೋಗುವಾಗ, ದಾಶರಥಿ ಎಂಬ ಭಕ್ತನ ಹೆಗಲ ಮೇಲೆ ಕೈಯೂರಿ ಹೋಗುವುದು, ಬರುವಾಗ ಧನುರ್ದಾಸನ ಹೆಗಲ ಮೇಲೆ ಮತ್ತೊಂದು ಕೈ ಇಟ್ಟುಕೊಂಡು ಬರುವುದು ವಾಡಿಕೆ. ಕ್ರಮೇಣ ಇದನ್ನು ವೀಕ್ಷಿಸುತ್ತಿದ್ದ ಕೆಲವು ಉತ್ತಮ ಜಾತಿಯ ಶಿಷ್ಯರಿಗೆ ಅಸಮಾಧಾನವಾಗಿ "ಧನುರ್ದಾಸನು ಕೀಳುಜಾತಿಯವನು. ಅವನಿಗೆ ಅಷ್ಟು ಪ್ರಾಧಾನ್ಯ ಏಕೆ ಕೊಡುವಿರಿ?" ಎಂದು ಕೇಳಿಯೇಬಿಟ್ಟರು. ರಾಮಾನುಜರು "ನಿಮ್ಮೆಲ್ಲರಿಗೂ ಇನ್ನೂ 'ಅಹಂ' ಇದೆ. ಆದರೆ ಧನುರ್ದಾಸನಿಗೆ ಅದರ ಸೋಂಕೇ ಇಲ್ಲ. ಆದ್ದರಿಂದ ಅವನ ಭುಜವನ್ನು ಆಶ್ರಯಿಸುವೆನು" ಎಂದರು. ಇದು ಬೇರೆ ಶಿಷ್ಯರಿಗೆ ಸಮಂಜಸವೆನಿಸಲಿಲ್ಲ. ಈ ಮಾತನ್ನು ತಮ್ಮ ಉತ್ತಮ ಕುಲದ ಮರ್ಯಾದೆಗೆ ಕಳಂಕವೆಂದೆಣಿಸಿದರು.

ಶಿಷ್ಯರ ವೈಮನಸ್ಯವನ್ನು ತೊಲಗಿಸಬೇಕೆಂದು, ರಾಮಾನುಜರು ಒಂದು ಯೋಜನೆ ಹೂಡಿದರು. ಮಠದ ವಿದ್ಯಾರ್ಥಿ ಶಿಷ್ಯರು ತಾವು ಒಗೆದುಕೊಂಡ ಬಟ್ಟೆಗಳನ್ನು ಮಠದ ಒಂದು ನಿರ್ದಿಷ್ಟ ಜಾಗದಲ್ಲಿ ಒಣಗಲು ಹಾಕುತ್ತಿದ್ದರು. ಶ್ರೀರಾಮಾನುಜರು ತಮ್ಮ ಆಪ್ತ ಶಿಷ್ಯನೊಬ್ಬನನ್ನು ಕರೆದು ಮರುದಿವಸ ಒಣಗಿದ್ದ ಬಟ್ಟೆಗಳನ್ನು ಮಡಿಸಿ, ಬೇರೆ ಜಾಗದಲ್ಲಿ ಬಚ್ಚಿಡಲು ಹೇಳಿದರು. ಶಿಷ್ಯನು ಅಂತೆಯೇ ಮಾಡಿದ.

ಮರುದಿನ, ಉಳಿದ ಶಿಷ್ಯರು, ಒಣಗಿದ ಬಟ್ಟೆಗಳನ್ನು ಕಾಣದೆ, ರಂಪ ರಾಮಾಯಣ ಮಾಡಿ, ಒಬ್ಬರನ್ನೊಬ್ಬರು ಬೈದಾಡಿಕೊಂಡರು. ಇದನ್ನು ಕಂಡ ಆಚಾರ್ಯರಿಗೆ ಒಳಗೊಳಗೇ ನಗು ಬಾರದಿರಲಿಲ್ಲ. ಅದನ್ನು ತೋರಿಸಿಕೊಳ್ಳದೆ, ದೇವರ ಅನುಗ್ರಹವಿದ್ದರೆ ಬಟ್ಟೆ ಸಿಕ್ಕೇ ಸಿಗುವುದು, ಎಲ್ಲೂ ಹೋಗುವುದಿಲ್ಲವೆಂದು ಸಮಾಧಾನದ ನುಡಿಗಳಾಡಿದರು.

ಇದಾದ ಕೆಲವು ದಿನಗಳ ನಂತರ, ಆಚಾರ್ಯರು, "ಶಿಷ್ಯರೇ, ನಿಮಗೆ ಬಟ್ಟೆ ಕಳೆದುಹೋದ್ದರಿಂದ ಅಪಾರ ನಷ್ಟವಾಗಿದೆ. ನಾನು ಒಂದು ಉಪಾಯ ಹೇಳುವೆ. ಅವುಗಳ ಬದಲು ಇನ್ನೂ ಬೆಲೆಬಾಳುವ ವಸ್ತುಗಳನ್ನು ನೀವು ಪಡೆಯಬಹುದೆಂದು ಹೇಳಿ, ಆ ರಾತ್ರಿ ಕನಕಾಂಬೆ ಒಬ್ಬಳೇ ಮಲಗಿರುವಾಗ, ನೀವು ಹೋಗಿ ಅವಳ ಮೈಮೇಲಿರುವ ಉತ್ತಮ ಆಭರಣಗಳನ್ನು ತೆಗೆದುಕೊಂಡು ಬನ್ನಿ. ನಂತರ ನೀವು ಅದನ್ನು ಹಂಚಿಕೊಳ್ಳಿ" ಎಂದರು.

ಆ ರಾತ್ರಿ ಧನುರ್ದಾಸನನ್ನು ಕೆಲಸದ ನಿಮಿತ್ತ ಮಠದಲ್ಲೇ ಇರಲು ಆಜ್ಞಾಪಿಸಿದರು. ಶಿಷ್ಯರ ಸಂತೋಷಕ್ಕೆ ಎಣೆಯೇ ಇಲ್ಲ. ಕತ್ತಲಾಗುವುದನ್ನೇ ಕಾದು, ಮಧ್ಯರಾತ್ರಿಯ ಹೊತ್ತಿನಲ್ಲಿ ಮೆಲ್ಲನೆ ಕಳ್ಳಹೆಜ್ಜೆ ಹಾಕುತ್ತಾ, ಕನಕಾಂಬೆಯ ಮನೆಗೆ ಹೋದರು. ಅವಳು ಗಾಢ ನಿದ್ರೆಯಲ್ಲಿರುವುದನ್ನು ಅರಿತು, ಮೆಲ್ಲನೇ ಒಂದೊಂದಾಗಿ ಆಭರಣಗಳನ್ನು ಕಳಚಿಕೊಂಡು ಗಂಟು ಕಟ್ಟಿದರು. ಅಷ್ಟರಲ್ಲಿ ಕನಕಾಂಬೆಗೆ ಎಚ್ಚರವಾಯಿತು. ಕೂಡಲೆ, "ವೈಷ್ಣವರು ಒಡವೆಗಾಗಿ ಬಂದಿದ್ದಾರೆ. ಅವುಗಳು ಇತರರಿಗೆ ಉಪಯೋಗವಾಗುವಂತಿದ್ದರೆ, ಅದು ನನ್ನ ಭಾಗ್ಯ. ಎಲ್ಲವನ್ನೂ ತೆಗೆದುಕೊಂಡು ಹೋಗಲಿ" ಎಂದು ಮನದಲ್ಲಿ ಯೋಚಿಸಿ, ನಿದ್ದೆ ಬಂದವಳಂತೆ ನಟಿಸುತ್ತ ಮಗ್ಗುಲು ಬದಲಾಯಿಸಿ ಮಲಗಿದಳು. ಆದರೆ ಆ ಕಳ್ಳರು ಅವಳಿಗೆ ಎಚ್ಚರವಾಯಿತೆಂದು ತಿಳಿದು, ಹೆದರಿ, ಸಿಕ್ಕಿದ್ದಷ್ಟನ್ನು ದೋಚಿ ಓಡಿಹೋದರು.

ಕದ್ದು ತಂದ ಒಡವೆಗಳ ಜೊತೆಗೆ ಶಿಷ್ಯರು ಮಠಕ್ಕೆ ಹಿಂತಿರುಗಿದರು. ಆ ವೇಳೆಗೆ ಶಿಷ್ಯವೃಂದವನ್ನು ಕಂಡು, ಧನುರ್ದಾಸನನ್ನು ಮನೆಗೆ ಹೋಗುವಂತೆ ಶ್ರೀರಾಮಾನುಜರು ತಿಳಿಸಿದರು. ತಮ್ಮ ನಿಷ್ಠಾವಂತ ಶಿಷ್ಯನೊಬ್ಬನನ್ನು ಕರೆದು, "ಧನುರ್ದಾಸನನ್ನು ಹಿಂಬಾಲಿಸಿ ಅಲ್ಲಿ ದಂಪತಿಗಳ ನಡುವೆ ಏನು ಸಂಭಾಷಣೆ ನಡೆಯುವುದೆಂದು ಕೇಳಿ, ತಿಳಿದು ಬಾ" ಎಂದರು.

ಇತ್ತ ಧನರ್ದಾಸನು ಮನೆಗೆ ಮರಳಿದಾಗ ನಿರಾಭರಣೆಯಾದ ಪತ್ನಿಯನ್ನುದ್ದೇಶಿಸಿ, "ಏಕೆ ಹೀಗಿರುವೆ? ರಾತ್ರೆ ಏನಾದರೂ ನಡೆಯಿತೇ? ನಾನು ಆಚಾರ್ಯರ ಆದೇಶದಂತೆ ಮಠದಲ್ಲೇ ಉಳಿಯಬೇಕಾಯಿತು" ಎನ್ನಲು, ಕನಕಾಂಬೆ ನಡೆದುದೆಲ್ಲವನ್ನೂ ವಿವರವಾಗಿ ಪತಿಗೆ ತಿಳಿಸಿದಳು. ಆತ "ಅಯ್ಯೋ! ಎಂತಹ ಕೆಲಸ ಮಾಡಿಬಿಟ್ಟೆಯಲ್ಲ! ನೀನು ಸುಮ್ಮನೆ ಮಲಗಿದ್ದರೆ, ಅವರು, ಹೇಗಾದರೂ ಉಪಾಯದಿಂದ ಎಲ್ಲಾ ಒಡವೆಗಳನ್ನೂ ತೆಗೆದುಕೊಳ್ಳಬಹುದಿತ್ತು. ನಿನ್ನ ಅಚಾತುರ್ಯದಿಂದ ಅವರ ಕೆಲಸ ಕೆಟ್ಟಿತು. ಅರ್ಧದಷ್ಟೇ ಸಾರ್ಥಕವಾಯಿತು, ಇನ್ನರ್ಧ ವ್ಯರ್ಥವಾಯಿತಲ್ಲ!" ಎಂದು ಬಹಳವಾಗಿ ಬೇಸರ ಮಾಡಿಕೊಂಡನು. ಕನಕಾಂಬೆಯು ಭಕ್ತಿ, ಶ್ರದ್ಧೆಯಲ್ಲಿ ಧನುರ್ದಾಸನಿಗಿಂತ ಕಮ್ಮಿಯಿರಲಿಲ್ಲ. ನಡೆಯಿರಿ, ಉಳಿದಿದ್ದನ್ನು ನಾವೇ ಹೋಗಿ ಮಠಕ್ಕೆ ಕೊಟ್ಟು ಬರೋಣವೆಂದಳು.

ನಂಬಿಕಸ್ಥನಾದ ಶಿಷ್ಯನು ಮರಳಿ ಮಠಕ್ಕೆ ಬಂದು, ರಾಮಾನುಜರಿಗೆ ಅಲ್ಲಿ ನಡೆದ ಸಂಭಾಷಣೆಯನ್ನು ವಿವರವಾಗಿ ಅರುಹಿದನು. ಆಗ ಅಲ್ಲಿ ಉಳಿದ ಶಿಷ್ಯರೂ ಜೊತೆಗಿದ್ದರು.

ಆಚಾರ್ಯರು, ಎಲ್ಲರನ್ನೂ ಸಂಬೋಧಿಸಿ, "ನೀವು ಕೇವಲ ಬಟ್ಟೆ ಹೋಗಿದ್ದಕ್ಕೆ, ಅಂದು ಅಷ್ಟೊಂದು ರಂಪ ಮಾಡಿ, ಒಬ್ಬರನ್ನೊಬ್ಬರು ದೂರಿದರಲ್ಲ! ನೋಡಿ, ಕೀಳುಜಾತಿಯುವನಾದರೇನು? ಆ ದಂಪತಿಗಳಲ್ಲಿರುವ ಶ್ರದ್ಧೆ, ಭಕ್ತಿ, ವಿಶ್ವಾಸವನ್ನು ನೋಡಿ. ಅದಕ್ಕೇ ನಾನು ದಂಪತಿಗಳನ್ನು ನನ್ನ ಪ್ರಿಯ ಭಕ್ತರನ್ನಾಗಿ ಸ್ವೀಕರಿಸಿರುವೆನು" ಎಂದರು. ನಂತರ ಮಠದಲ್ಲಿ ಎಲ್ಲರನ್ನೂ ಸಂಬೋಧಿಸಿ, "ಯಾರಿಗೆ ಆಸುರೀ ಸಂಪತ್ತಿದೆ, ಯಾರಿಗೆ ದೈವೀ ಸಂಪತ್ತಿದೆ, ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಿ" ಎಂದು ನುಡಿದರು.

## ಪ್ರಹಸನ ಪ್ರಸಂಗ

ಮಧ್ಯವಯಸ್ಸಿನ ಮಹಿಳೆಯೊಬ್ಬಳಿಗೆ ಹೃದಯಾಘಾತವಾಗಿ ಆಸ್ಪತ್ರೆಗೆ ಸೇರಿಸಬೇಕಾಯಿತು. ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಆಕೆಗೆ ಮೃತ್ಯುಸಾಮೀಪ್ಯದ ಒಂದು ಅನುಭವವಾಯಿತು (Near Death Experience). ದೇವರನ್ನು ಕಂಡಾಗ, ಆಕೆ ಕೇಳಿದಳು, "ನನ್ನ ಸಮಯ ಈಗ ಬಂತೆ?" ದೇವರು, "ಇಲ್ಲ, ಇಲ್ಲೇನೋ ತಪ್ಪಾಗಿದೆ. ನೀನು ಇನ್ನೂ ೪೩ ವರ್ಷ, ೨ ತಿಂಗಳು ಹಾಗೂ ೮ ದಿನಗಳ ಕಾಲ ಬದುಕುವೆ" ಎಂದು ಹೇಳಿದ.

ಚೇತರಿಸಿಕೊಂಡ ನಂತರ ಆ ಮಹಿಳೆ ಆಸ್ಪತ್ರೆಯಲ್ಲೇ ಇದ್ದು, ಮುಖದ ಸುಕ್ಕುಗಳನ್ನು ಹೋಗಲಾಡಿಸಿಕೊಂಡು, ಅಂಗ ಸೌಷ್ಟವವನ್ನು ಸರಿಮಾಡಿಸಿಕೊಂಡು, ಯುವತಿಯಾಗಿ ಬದಲಾದಳು. ತಲೆಯ ಕೂದಲಿಗೂ ಬಣ್ಣ ಹಾಕಿಸಿಕೊಂಡಳು. ಇನ್ನೂ ಅನೇಕ ವರ್ಷಗಳ ಆಯಸ್ಸು ಇರುವುದರಿಂದ ಮಜವಾಗಿ ಜೀವಿಸಬಹುದು ಎಂದು ಭಾವಿಸಿದಳು. ಎಲ್ಲ ಸೌಂದರ್ಯವರ್ಧಕ ಶಸ್ತ್ರಚಿಕಿತ್ಸೆಗಳ ನಂತರ ಆಸ್ಪತ್ರೆಯಿಂದ ಹೊರಬಂದಳು. ಮನೆಗೆ ಹಿಂದಿರುಗುವಾಗ ದಾರಿಯಲ್ಲಿ ಒಂದು ಆ್ಯಂಬುಲೆನ್ಸ್ ಗಾಡಿಗೆ ಸಿಕ್ಕಿಕೊಂಡು ಸತ್ತಳು!

ಮತ್ತೆ ದೇವರ ಮುಂದೆ ಬಂದಾಗ ಸ್ವಲ್ಪ ಒರಟಾಗಿಯೇ ಕೇಳಿದಳು, "ಏನಿದು, ಇನ್ನೂ ೪೦ ವರ್ಷ ಜೀವಿಸುತ್ತೇನೆ ಅಂತ ನೀನೇ ಹೇಳಿದ್ದೆ! ನನ್ನನ್ನು ಆ್ಯಂಬುಲೆನ್ಸ್ ಗಾಡಿಯ ಅಡಿಯಿಂದ ಏಕೆ ಹೊರಕ್ಕೆಳೆದು ಕಾಪಾಡಲಿಲ್ಲ?" ದೇವರು ಹೇಳಿದ, "ನನಗೆ ನಿನ್ನ ಗುರುತೇ ಸಿಗಲಿಲ್ಲವಲ್ಲ!"

+ + +

ಗಂಡ ಹೆಂಡತಿಯ ನಡುವೆ ಜಗಳ ಪ್ರಾರಂಭವಾಗಿತ್ತು, ಗಂಡ ಹೇಳಿದ, "ನೋಡು, ಸ್ವಲ್ಪ ವಿವೇಚನೆಯಿಂದ ಚರ್ಚೆ ಮಾಡೋಣ. ಜಗಳ ಮಾಡುವುದು ಬೇಡ." "ಇಲ್ಲ, ಪ್ರತಿ ಬಾರಿ ನಾವು ಹಾಗೆ ವಿಚಾರ ಮಾಡಿದಾಗಲೂ ನಾನೇ ಸೋಲುತ್ತೇನೆ!" ಎಂದಳು ಪತ್ನಿ.

+ + +

ಶಾಲೆಯಲ್ಲಿ ಉಪಾಧ್ಯಾಯರು ಮಕ್ಕಳಿಗೆ "ಸೋಮಾರಿತನ ಎಂದರೇನು?" ಎಂಬ ವಿಷಯವನ್ನು ಕುರಿತು ಪ್ರಬಂಧ ಬರೆಯುವ ಮನೆಕೆಲಸ ನೀಡಿದ್ದರು.

ಮಾರನೆಯ ದಿವಸ ಮಕ್ಕಳು ತಮ್ಮ ತಮ್ಮ ಪುಸ್ತಕಗಳನ್ನು ಉಪಾಧ್ಯಾಯರ ಮೇಜಿನ ಮೇಲೆ ಜೋಡಿಸಿಟ್ಟರು. ಒಬ್ಬ ವಿದ್ಯಾರ್ಥಿಯ ಪುಸ್ತಕವನ್ನು ಕೈಗೆತ್ತಿಕೊಂಡು ಪುಟ ತಿರುವಿದರು ಮೇಷ್ಟರು. ಮೊದಲನೆಯ ಪುಟ, ಎರಡನೆಯ ಪುಟ, ಮೂರನೆಯ ಪುಟ ಎಲ್ಲವೂ ಖಾಲಿ! ನಾಲ್ಕನೆಯ ಪುಟದಲ್ಲಿ "ಇದೇ ಸೋಮಾರಿತನ!" ಎಂದಷ್ಟೇ ಬರೆದಿತ್ತು.

+ + +

ಒಬ್ಬ ಪೇದೆ (ಪೋಲಿಸ್ ಸ್ಟೇಷನ್ನಿಗೆ ಕರೆ ಮಾಡಿ) : ಸರ್, ಇಲ್ಲಿ ಒಬ್ಬ ವ್ಯಕ್ತಿಯು ಕಳೆದುಹೋಗಿದ್ದಾನಂತೆ. ನನ್ನ ಕೈಗೆ ಒಬ್ಬನು ಸಿಕ್ಕಿಹಾಕಿಕೊಂಡಿದ್ದಾನೆ.

ಎಸ್.ಐ.: ಹೌದೆ! ಯಾರು ಸಿಕ್ಕಿಹಾಕಿಕೊಂಡವನು?

ಪೇದೆ : ಕಳೆದುಹೋದವನು ಸಾರ್.

+ + +